# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಡಿಸೆಂಬರ್– 2020

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ–1

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

**ದಿನಾಂಕ: 19.12.2020 ಗರಿಷ್ಟ ಅಂಕಗಳು–100 ಸಮಯ: ಮದ್ಯಾಹ್ನ 1.30 ರಿಂದ 3.30 ರವರೆಗೆ**

---

**1. ಈ ಕೆಳಕಂಡ ವಾಕ್ಯಗಳನ್ನು ಯಾವ ಪಾಠದಿಂದ ಆರಿಸಿದೆ? ಯಾರು? ಯಾರಿಗೆ? ಯಾವ ಸಂದರ್ಭದಲ್ಲಿ ಹೇಳಿದರು?ವಿವರಿಸಿ:– (ಐದಕ್ಕೆ ಮಾತ್ರ ಉತ್ತರಿಸಿ) 20 ಅಂಕಗಳು**

a) "ಮನುಷ್ಯನನ್ನು ಅವನ ನುಡಿಯಿಂದ ಗುರುತಿಸಬಹುದು"

b) "ತಾವು ದಯಮಾಡಿ ಎಷ್ಟನ್ನು ಕೊಡುತ್ತೀರೋ ಅಷ್ಟನ್ನು ನಾನು ತೆಗೆದುಕೊಳ್ಳುವೆನು".

c) "ಅವನ ಕಷ್ಟಗಳಿಗಿಂತ ನಿನ್ನ ಕಷ್ಟಗಳು ಹೆಚ್ಚಿನದೇನಲ್ಲ, ನನ್ನ ಹಣವನ್ನು ಇಪ್ಪತ್ತನಾಲ್ಕು ಗಂಟೆಯೊಳಗೆ ವಾಪಸ್ಸು ಮಾಡಬೇಕು."

d) "ಈ ಉಂಗುರ ನನಗೆ ಬಾವಿಯಲ್ಲಿ ಸಿಕ್ಕಿತು."

e) "ಅಮ್ಮಾ! ನನಗೆ ಇಂಥ ಗತಿ ಬಂತು! ನಿನ್ನೊಡನೆ ಒಂದು ಮಾತನಾಡಬೇಕು; ಹತ್ತಿರ ಬಾ."

f) ಅವೆಲ್ಲಾ ಸಾಧ್ಯವಿಲ್ಲ. ಕೊಟ್ಟೇ ಮುಂದಕ್ಕೆ ಹೋಗಬೇಕು.

g) ಒಂದು ವೇಳೆ ಈಗ ಈ ಸಂದನ್ನು ಮುಚ್ಚದಿದ್ದರೆ, ಇದೇ ರೀತಿ ನೀರು ನುಗ್ಗಿ ಕಟ್ಟೆ ಒಡೆದು ಇಡೀ ಊರಿಗೆ ಊರೇ ಕೊಚ್ಚಿ ಹೋಗುವುದು.

**2. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಒಂದು ಪುಟ ಮೀರದಂತೆ ವಿವರಣೆ ಬರೆಯಿರಿ:– 20 ಅಂಕಗಳು**

**ಅ.** ಶಿವ ಕೊಟ್ಟ ವರ.

**ಆ.** ಒಳ್ಳೆಯ ಮಾತು

**ಇ.** ಶ್ರಮದ ಫಲ.

**3. ಈ ಕೆಳಗಿನ ಯಾವುದಾದರೂ ಐದಕ್ಕೆ ಸಮಾನಾರ್ಥಕ ಪದ ಬರೆಯಿರಿ:– 5 ಅಂಕಗಳು**

**ಅ** ತೈಲ **ಆ.** ಪತನ **ಇ.** ನೀರು **ಈ.** ಆನೆ **ಉ.** ತಾಕೀತು **ಊ.** ಸಂಕುಲ

**4. ಈ ಕೆಳಗಿನ ಯಾವುದಾದರೂ ಐದಕ್ಕೆ ವಿರುದ್ಧ ಪದ ಬರೆಯಿರಿ:– 5 ಅಂಕಗಳು**

**ಅ** ಸೂರ್ಯೋದಯ **ಆ.** ಸಾರ್ಥಕ **ಇ.** ಸಂಶಯ **ಈ.** ಆರಂಭ **ಉ.** ಉಚಿತ **ಊ.** ಏಕ **ಋ.** ಪರಾಕ್ರಮಿ

**5. ಈ ಕೆಳಗಿನ ಯಾವುದಾದರು ಐದು ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ:– 5 ಅಂಕಗಳು**

**ಅ.** 59,03,00,568 **ಆ.** 9,99,999 **ಇ.** 5,00,847 **ಈ.** 3,05,008 **ಉ.** 11,26,56,204

**ಊ.** 2,00,695 **ಋ.** 1,00,005

**6. ಈ ಕೆಳಗಿನವುಗಳಲ್ಲಿ ಯಾವುದಾದರು ಐದಕ್ಕೆ ಅಂಕಿಯಲ್ಲಿ ಬರೆಯಿರಿ:– 5 ಅಂಕಗಳು.**

**ಅ.** ಒಂದು ಲಕ್ಷದ ಐದುನೂರ ಮೂವತ್ತೆಂಟು

**ಆ.** ಎಂಭತ್ತೆಂಟು ಕೋಟಿ ಏಳು ಸಾವಿರದ ಎರಡು

**ಇ.** ಆರು ಕೋಟಿ ಮೂರು ಸಾವಿರದ ಮೂರು

**ಈ.** ಮೂರು ಸಾವಿರದ ಮೂರು.

**ಉ.** ಒಂದು ಕೋಟಿ ಹನ್ನೆರಡು ಲಕ್ಷದ ಮೂರು ಸಾವಿರದ ಆರು ನೂರ ಎಂಟು.

**ಊ.** ಮೂರು ಕೋಟಿ ಇಪ್ಪತ್ತೆಂಟು ಲಕ್ಷದ ಆರು ನೂರ ಅರವತ್ತೈದು

**ಋ.** ಐವತ್ತು ಸಾವಿರದ ನಲವತ್ತೈದು

**7. ಈ ಕೆಳಗಿವುಗಳಲ್ಲಿ ಯಾವುದಾದರೂ ಐದಕ್ಕೆ ಬಹುವಚನ ಪದಗಳನ್ನು ಬರೆಯಿರಿ:–** **5 ಅಂಕಗಳು**

**ಅ.** ಅರಮನೆ **ಆ.** ನೀನು **ಇ.** ಸುಂದರಿ **ಈ.** ರುಮಾಲು **ಉ.** ಆಟೋ **ಊ.** ಲೋಕ **ಋ.** ತಾತ

**8. ಈ ಕೆಳಗಿವುಗಳಲ್ಲಿ ಯಾವುದಾದರೂ ಐದಕ್ಕೆ ಲಿಂಗವನ್ನು ಬರೆಯಿರಿ:–** **5 ಅಂಕಗಳು**

**ಅ.** . ಸೊಗಸುಗಾರ **ಆ.** ಗುಣವಂತ **ಇ.** ಬ್ರಹ್ಮಚಾರಿ **ಈ** ಜೊತೆಗಾತಿ

**ಉ.** ಶ್ರೀಮಾನ್ **ಊ.** ಮಾವ **ಋ.** ಚಾಲಕ

**9. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ** **5 ಅಂಕಗಳು**

| | |
|---|---|
| **ಅ.** ಜನಗಣಮನ | i) ವೀರ ವನಿತೆ |
| **ಆ.** ಎಂ.ಎಸ್.ಸುಬ್ಬಲಕ್ಷ್ಮಿ | ii) ರವೀಂದ್ರನಾಥ್ ಟ್ಯಾಗೂರ್ |
| **ಇ** ಕಿತ್ತೂರು ಚೆನ್ನಮ್ಮ | iii) ಗಾನ ಕೋಗಿಲೆ |
| **ಈ** ಹಂಪಿ | iv) ಚಾಕಲೇಟು. |
| **ಉ.** ಕೊಕೊ | v) ಕಲ್ಲಿನ ರಥ. |

**10. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ** **10 ಅಂಕಗಳು**

**ಅ.** ಚಿನ್ನಯ್ಯ ಏನು ತೀರ್ಪು ನೀಡಿದ?

**ಆ.** ಸಾಧುವು ರಾಜನಿಗೆ ಏಕೆ ಸಹಾಯ ಮಾಡಿದನು?

**ಇ.** ಶಿವಾಜಿಯು ಅಹಮದನ ಹೆಂಡತಿಗೆ ಏನೆಂದನು?

**ಈ.** ಡಿಂಭನ ತಾಯಿ ಅವನನ್ನು ಮಠಕ್ಕೆ ಏಕೆ ಕಳಿಸಿದಳು?

**ಉ.** ಸಾಂಬಾಜಿಯು ಶರಣಪ್ಪನಿಂದ ಏನನ್ನು ನಿರೀಕ್ಷಿಸಿದನು?

**11. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಒಂದು ಪುಟ ಮೀರದಂತೆ ಪ್ರಬಂಧ ಬರೆಯಿರಿ.** **5 ಅಂಕಗಳು**

**ಅ.** ಭ್ರಷ್ಟಾಚಾರ ಒಂದು ಸಾಮಾಜಿಕ ಪಿಡುಗು

**ಆ.** ತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಮಸ್ಯೆ

**12. ಈ ಕೆಳಗಿನ ಪಾಠವನ್ನು ಓದಿ ಸಂಬಂಧಿಸಿ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಮಾನವ ಬದುಕಲು ಗಾಳಿ, ಬೆಳಕು, ನೀರು ಅತಿ ಅಗತ್ಯವಾದರು ಕೂಡ ಅವನ್ನು ಕಾಪಾಡಿಕೊಳ್ಳುವುದು ಕೂಡ ಅಷ್ಟೇ ಅಗತ್ಯವಾಗಿದೆ. ಅನಗತ್ಯವಾಗಿ ಮಾನವ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾನೆ. ಅವುಗಳ ಕೊಳಕನ್ನು ನದಿಗೋ, ಕೆರೆಗೋ, ಹಳ್ಳಕ್ಕೋ ಹರಿಬಿಡುತ್ತಾನೆ. ಕಾರ್ಖಾನೆಗಳ ಹೊಗೆಯಿಂದ ವಾಯುಮಾಲಿನ್ಯ ಉಂಟಾದರೆ, ಅದರ ಕೊಳಚೆ ನೀರು ನದಿಯನ್ನು ಸೇರಿ ಜಲಮಾಲಿನ್ಯವುಂಟಾಗುತ್ತಿದೆ. ನೀರನ್ನು ಭೂಮಿಯ ಮೇಲಿನ ಅಮೃತ, ಜೀವಜಲ ಎಂದು ಕರೆಯುತ್ತಾರೆ. ಆದರೆ ಅದನ್ನು ನಾವು ಅಗತ್ಯಕ್ಕಿಂತ ಹೆಚ್ಚು ಬಳಸುತ್ತೇವೆ. ಕೆಲವೊಮ್ಮೆ ನಲ್ಲಿಗಳನ್ನು ಹಾಗೆಯೇ ತೆರೆದಿಟ್ಟು ಹೋಗಿಬಿಡುತ್ತೇವೆ. ಇದರಿಂದ ಅಪಾರ ನೀರು ನಷ್ಟವಾಗುತ್ತದೆ. ಕಾಡಿನ ನಾಶದಿಂದಾಗಿ ಈಗೀಗ ಮಳೆಯೂ ಕಡಿಮೆಯಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಮುಂದೊಂದು ದಿನ ಹನಿ ನೀರಿಗು ಪರದಾಡಬೇಕಾಗುತ್ತದೆ. ಆದ್ದರಿಂದ ಒಂದೊಂದು ಹನಿ ನೀರನ್ನೂ ಕಾಪಾಡಬೇಕು. ನೀರನ್ನು ವ್ಯರ್ಥವಾಗಿ ಪೋಲು ಮಾಡಬಾರದು. ಜಲಸಂರಕ್ಷಣೆ ಪ್ರತಿಯೊಬ್ಬರ ಆದ್ಯಕರ್ತವ್ಯ ಎಂಬುದನ್ನು ಅರಿತುಕೊಳ್ಳಬೇಕು. ನೀರು ಪೋಲಾಗುವುದನ್ನು ತಡೆಗಟ್ಟಲು ಪ್ರತಿಯೊಬ್ಬರೂ ಮುಂದಾದರೆ ನಮ್ಮ ನೀರಿನ ಸಮಸ್ಯೆಯನ್ನು ನಾವು ಬಗೆಹರಿಸಿಕೊಳ್ಳಬಹುದು. ಹಾಗಾಗಿ ಎಲ್ಲರೂ ಆ ದಿಶೆಯಲ್ಲಿ ಪ್ರಯತ್ನಶೀಲರಾಗಬೇಕು.

**ಪ್ರಶ್ನೆಗಳು:–**

1. ಅಂತರ್ಜಲ ಕಡಿಮೆಯಾಗಲು ಕಾರಣವೇನು? **2 ಅಂಕಗಳು**
2. ಮಾನವ ಬದುಕಿಗೆ ಯಾವುದು ಅಗತ್ಯವಿದೆ? **2 ಅಂಕಗಳು**
3. ಜಲಮಾಲಿನ್ಯ ಮತ್ತು ವಾಯುಮಾಲನ್ಯಗಳಿಗೆ ಕಾರಣವೇನು? **3 ಅಂಕಗಳು**
4. ಜಲಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಬಗೆ ಹೇಗೆ? **3 ಅಂಕಗಳು**

* * * * *

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕನ್ನಡ ಇಲಾಖಾ ಪರೀಕ್ಷೆಗಳು – ಡಿಸೆಂಬರ್–2020

## ಕನ್ನಡ ಭಾಷಾ ಪರೀಕ್ಷೆ – ಪತ್ರಿಕೆ–2

(ಪುಸ್ತಕಗಳು, ಟಿಪ್ಪಣಿಗಳು, ಕೈಪಿಡಿಗಳು ಇತ್ಯಾದಿಗಳ ಉಪಯೋಗಕ್ಕೆ ಅವಕಾಶವಿಲ್ಲ)

**ದಿನಾಂಕ: 19.12.2020 ಗರಿಷ್ಟ ಅಂಕಗಳು–50 ಸಮಯ: ಮದ್ಯಾಹ್ನ 4.00 ರಿಂದ 5.00 ರವರೆಗೆ**

---

**1. ಆಂಗ್ಲ ಭಾಷೆಗೆ ಅನುವಾದಿಸಿ: 10 ಅಂಕಗಳು**

<u>**ಸರಕು ಮತ್ತು ಸೇವಾ ತೆರಿಗೆ**</u>

ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ದೇಶದ ಬಹು ನಿರೀಕ್ಷಿತ ತೆರಿಗೆ ಸುಧಾರಣೆಗಳಲ್ಲಿ ಒಂದಾಗಿದೆ. ಜಿ.ಎಸ್.ಟಿ ಇಡೀ ದೇಶದ "ಒಂದೇ ಪರೋಕ್ಷ ತೆರಿಗೆ" ಆಗಿದೆ, ಇದು ಭಾರತವನ್ನು ಏಕೀಕೃತ ಸಾಮಾನ್ಯ ಮಾರುಕಟ್ಟೆಯನ್ನಾಗಿ ಮಾಡುತ್ತದೆ.

ಈ ತೆರಿಗೆ ವ್ಯವಸ್ಥೆಯನ್ನು ಭಾರತದಾದ್ಯಂತ ಜಾರಿಗೆ ತರಲಾಗಿದೆ. ಬಳಕೆಯ ಹಂತದಿಂದ ಈ ತೆರಿಗೆಯ ಸಂಗ್ರಹವನ್ನು ಮಾಡಲಾಗುತ್ತದೆ ಹಾಗೂ ಉತ್ಪಾದನಾ ಪ್ರಕ್ರಿಯೆಯ ಪ್ರತಿ ಹಂತದಲ್ಲೂ ಈ ತೆರಿಗೆ ವಿಧಿಸಲಾಗುತ್ತದೆ. ಉತ್ಪಾದನೆಯ ವಿವಿಧ ಹಂತಗಳಲ್ಲಿರುವ ಎಲ್ಲಾ ಉತ್ಪಾದಕರಿಗೂ ಮರುಪಾವತಿ ಸಾಧ್ಯವಿದೆ. ಜಿ.ಎಸ್.ಟಿ ಬಹುತೇಕ ಎಲ್ಲಾ ಪರೋಕ್ಷ ತೆರಿಗೆಗಳನ್ನು ಒಳಗೊಂಡಿದೆ.

ಮೊದಲನೆಯದಾಗಿ, ಸರಕಯ ಮತ್ತು ತೆರಿಗೆ (ಜಿ.ಎಸ್.ಟಿ) ಒಂದೇ ತೆರಿಗೆ ವ್ಯವಸ್ಥೆ. ಈ ತೆರಿಗೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಹೇರುತ್ತವೆ. ಇದಲ್ಲದೆ, ಫೆಡರಲ್ ಕೌನ್ಸಿಲ್ನ ಶಿಫಾರಸಿನೊಂದಿಗೆ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಲಾಗುತ್ತದೆ. ಎಲ್ಲಾ ವಹಿವಾಟುಗಳಿಗೆ ಜಿಎಸ್‌ಟಿ ಅನ್ವಯವಾಗುತ್ತದೆ. ಈ ವಹಿವಾಟುಗಳು ಮಾರಾಟ, ಖರೀದಿ, ವರ್ಗಾವಣೆ, ಗುತ್ತಿಗೆ ಮತ್ತು ಆಮದು.

**2. ಈ ಕೆಳಗಿನ ಪದಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ: 10 ಅಂಕಗಳು.**

| | | | |
|---|---|---|---|
| ಅ. ಕಾರ್ಯಾದೇಶ. | ಆ.. ನಿರ್ವಹಣೆ ವೆಚ್ಚಗಳು. | ಇ. ವಿದ್ಯುತ್ ಕೇಂದ್ರ | ಈ. ಕಛೇರಿ ಆದೇಶ |
| ಉ ಗೈರು ಹಾಜರಿ | ಊ. ಅಪಘಾತ ಅನುದಾನ. | ಋ. ಮುಕ್ತಾಯ ಶಿಲ್ಕು | ಎ. ಅನುಮತಿ |
| ಏ. ಅಂಗೀಕರಿಸು | ಐ. ಚಾಲ್ತಿ ಖಾತೆ | | |

**3. ಕನ್ನಡ ಭಾಷೆಗೆ ಭಾಷಾಂತರಿಸಿ: 10 ಅಂಕಗಳು**

Swachh Bharat Abhiyan is also known as Swachh Bharat Mission and Cleanliness Campaign. It was officially launched from Rajghat in New Delhi on 2 October 2014, on the occasion of Mahatma Gandhi's 145th birth anniversary, by Prime Minister Narendra Modi. This whole week is celebrated as Cleanliness Week.

Narendra Modi started this mission with the intention of making the whole of India clean till Gandhiji's 150th birth anniversary which will be completed in 2019. Till now the figures in rural areas of India were limited to 40% in 2014, they have increased to 98%. The main objective of this scheme is to make people aware of cleanliness and to make India clean, which was the dream of Mahatma Gandhi ji and what can be a better way to celebrate his birthday.

**4. ಈ ಕೆಳಗಿನ ಪದಗಳನ್ನು ಕನ್ನಡ ಭಾಷೆಗೆ ಅನುವಾದಿಸಿ: 10 ಅಂಕಗಳು**

ಅ. Annual ಆ. Period ಇ. Certificate ಈ. Proposal

ಉ Classification ಊ. Promotion ಋ Town Hall ೠ. Advance bill

ಎ. Abnormal Consumption. ಏ. Special casual leave

**5. ಈ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ: 5 ಅಂಕಗಳು**

ಅ. We two ours two.

ಆ. Every month second and fourth Saturdays are holidays.

ಇ. This order comes into effect immediately.

ಈ An apple a day keeps the doctor away.

ಉ. Empty pots make more noise

**6. ಈ ಕೆಳಗಿನ ವಾಕ್ಯಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿ: 5 ಅಂಕಗಳು.**

ಅ. ಪ್ರಪಂಚದಲ್ಲಿ ಭಾರತವು ಐದನೇ ಅತಿ ಹೆಚ್ಚು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುವ ರಾಷ್ಟ್ರವಾಗಿದೆ.

ಆ. ಮೈಸೂರು ನಗರವು ಪಾರಂಪರಿಕ ನಗರವಾಗಿದೆ.

ಇ. ಕರ್ನಾಟಕ ರಾಜ್ಯವು ಭಾರತದಲ್ಲಿ ಅತಿ ಹೆಚ್ಚು ಕಾಫಿಯನ್ನು ಉತ್ಪಾದಿಸುತ್ತದೆ.

ಈ ಬೇರೆಯವರ ಮಾತನ್ನು ಸಹಾನುಭೂತಿಯಿಂದ ಕೇಳಿ.

ಉ ವೃದ್ಧರು ಮತ್ತು ಹಿರಿಯರೊಂದಿಗೆ ಮಾತನಾಡುವಾಗ ಸದಾ ಗೌರವ ನೀಡಬೇಕು

* * * * *